ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 30-11-1992.

# *ಆಶೀರ್ವಾದಗಳನ್ನು ಕೊಡಿ ಮತ್ತು ಅಶೀರ್ವಾದಗಳನ್ನು ಪಡೆದುಕೊಳ್ಳಿ*

(सर्व खज़ानों से सम्पन्न बनो - दुआए दो, दुआए लो)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಆಶೀರ್ವಾದಗಳ ಖಜಾನೆಯಿಂದ ಸಂಪನ್ನವಾಗಿ ತಯಾರು ಮಾಡುವ ಬಾಪ್‌ದಾದಾ ತನ್ನ ಜ್ಞಾನಿ ಆತ್ಮರಾದ ಮಕ್ಕಳೊಂದಿಗೆ ಮಾತನಾಡುತ್ತಿದ್ದಾರೆ.**

ಇಂದು ಸರ್ವಖಜಾನೆಗಳಿಗೆ ಮಾಲೀಕ(ಯಜಮಾನಿ) ತನ್ನ ಸಂಪನ್ನ ಮಕ್ಕಳನ್ನು ನೋಡುತ್ತಿದ್ದಾರೆ. ಪ್ರತಿಯೊಂದು ಮಗುವಿಗೆ ಅನೇಕ ಪ್ರಕಾರದ ಅವಿನಾಶಿ ಅಕ್ಷಯ ಖಜಾನೆಗಳು ಲಭಿಸಿವೆ ಮತ್ತು ಅವು ಎಂತಹ ಖಜಾನೆಗಳು ಎಂದರೆ ಈಗಲೂ ಜೊತೆಗಿರುತ್ತವೆ ಮತ್ತು ಭವಿಷ್ಯದಲ್ಲಿ ಅನೇಕ ಜನ್ಮಗಳಿಗಾಗಿಯೂ ಜೊತೆ ಇರುತ್ತವೆ. ಯಾವ ಯಾವ ಖಜಾನೆಗಳು ಮತ್ತು ಎಷ್ಟು ಖಜಾನೆಗಳು ಲಭಿಸಿವೆಯೋ ನಿಮಗೆ ಗೊತ್ತೇ? ಖಜಾನೆಗಳಿಂದ ಸದಾ ಪ್ರಾಪ್ತಿ ಆಗುತ್ತದೆ. ಖಜಾನೆಗಳಿಂದ ಸಂಪನ್ನ ಆತ್ಮ ಸದಾ ಪೂರ್ಣತೆಯ(ತುಂಬಿತುಳುಕುವ) ನಶೆಯಲ್ಲಿ ಇರುತ್ತದೆ. ಸಂಪನ್ನತೆಯ ಹೊಳಪು ಅವರ ಮುಖದಲ್ಲಿ ಹೊಳೆಯುತ್ತಿರುತ್ತದೆ ಮತ್ತು ಪ್ರತಿಯೊಂದು ಕರ್ಮದಲ್ಲಿ ಸಂಪನ್ನತೆಯ ಹೊಳಪು ಸ್ವತಃವಾಗಿ ಕಂಡುಬರುತ್ತದೆ. ಈ ಸಮಯದಲ್ಲಿ ಮನುಷ್ಯಾತ್ಮರಿಗೆ ವಿನಾಶಿ ಖಜಾನೆಗಳ ಪ್ರಾಪ್ತಿಯಾಗಿದೆ. ಆದ್ದರಿಂದ ಸ್ವಲ್ಪ ಸಮಯ

ನಶೆಯಿರುತ್ತದೆ. ಸದಾ ಇರುವುದಿಲ್ಲ. ಆದ್ದರಿಂದ ಪ್ರಪಂಚದವರು ಹೇಳುತ್ತಾರೆ - ಖಾಲಿಯಾಗಿ ಹೋಗಬೇಕೆಂದು. ಆದರೆ ನಾವು ಭರ್ಪೂರಾಗಿ ಹೋಗಬೇಕೆಂದು ಹೇಳುತ್ತೇವೆ. ತಮ್ಮೆಲ್ಲರಿಗೂ ಬಾಪ್‌ದಾದಾರವರು ಅನೇಕ ಖಜಾನೆಗಳನ್ನು ಕೊಟ್ಟಿದ್ದಾರೆ.

**ಎಲ್ಲದಕ್ಕಿಂತ ಶ್ರೇಷ್ಠ ಮೊದಲನೆಯ ಖಜಾನೆ** - ಜ್ಞಾನರತ್ನಗಳ ಖಜಾನೆಯಾಗಿದೆ. ಈ ಖಜಾನೆ ಎಲ್ಲರಿಗೂ ಲಭಿಸಿದೆಯಲ್ಲವೇ. ಯಾರೂ ವಂಚಿತರಾಗಿಲ್ಲ ತಾನೇ. ಈ ಜ್ಞಾನ-ರತ್ನಗಳ ಖಜಾನೆಯಿಂದ ವಿಶೇಷವಾಗಿ ಏನು ಪ್ರಾಪ್ತಿ ಮಾಡಿಕೊಳ್ಳುತ್ತಿದ್ದೀರಿ? ಜ್ಞಾನದ ಖಜಾನೆಯ ಮುಖಾಂತರ ಈ ಸಮಯದಲ್ಲಿ ಮುಕ್ತಿ-ಜೀವನ್ಮುಕ್ತಿಯ ಅನುಭೂತಿ ಮಾಡುತ್ತಿದ್ದೀರಿ. ಮುಕ್ತಿಧಾಮಕ್ಕೆ ಹೋಗುತ್ತೀರೋ ಅಥವಾ ಜೀವನ್ಮುಕ್ತಿ ದೈವೀ ಪದವಿಯನ್ನು ಪ್ರಾಪ್ತಿ ಮಾಡಿಕೊಳ್ಳುತ್ತೀರಾ - ಇದಂತೂ ಭವಿಷ್ಯದ ಮಾತಾಗಿದೆ. ಆದರೆ ಈಗಲೂ ಸಹ ಮುಕ್ತ ಜೀವನದ ಅನುಭವ ಮಾಡುತ್ತಿದ್ದೀರಾ? ಎಷ್ಟು ವಿಷಯಗಳಿಂದ ಮುಕ್ತರಾಗಿದ್ದೀರಿ. ತಿಳಿದಿದೆಯೇ? ಏನೆಲ್ಲಾ ದುಃಖ-ಅಶಾಂತಿಯ ಕಾರಣಗಳಿದೆಯೋ ಅದರಿಂದ ಮುಕ್ತರಾಗಿದ್ದೀರಾ ಅಥವಾ ಈಗ ಮುಕ್ತರಾಗಬೇಕೇನು? ಈಗ ಯಾವುದೇ ವಿಕಾರ ಬರುವುದಿಲ್ಲ ತಾನೆ? ಮುಕ್ತರಾಗಿದ್ದೀರಲ್ಲವೇ. ಒಂದುವೇಳೆ ಇನ್ನೂ ಬರುತ್ತಿದ್ದರೂ ಸಹ ವಿಜಯಿ ಆಗಿಬಿಡುತ್ತೀರಲ್ಲವೇ. ಅಂದಾಗ ಎಷ್ಟು ವಿಷಯಗಳಿಂದ ಮುಕ್ತರಾಗಿದ್ದೀರಿ! ಲೌಕಿಕ ಜೀವನ ಮತ್ತು ಅಲೌಕಿಕ ಜೀವನ ಎರಡರ ಹೊರೆ ಇದ್ದಾಗ ಎಷ್ಟು ಅಂತರ ಕಂಡುಬರುತ್ತದೆ! ಅಂದಮೇಲೆ ಈಗ ಮುಕ್ತಿಯೂ ಸಹ ಪ್ರಾಪ್ತಿಯಾಗಿದೆ ಮತ್ತು ಜೀವನ್ಮುಕ್ತಿಯನ್ನೂ ಸಹ ಅನುಭವ ಮಾಡುತ್ತಿದ್ದೀರಿ. ಅನೇಕ ವ್ಯರ್ಥ ಮತ್ತು ವಿಕಲ್ಪ. ವಿಕರ್ಮಗಳಿಂದ ಮುಕ್ತರಾಗಬೇಕು-ಇದೇ ಜೀವನ್ಮುಕ್ತಿಯ ಅವಸ್ಥೆಯಾಗಿದೆ. ಎಷ್ಟು ಬಂಧನಗಳಿಂದ ಮುಕ್ತರಾಗಿದ್ದೀರಿ? ಎಷ್ಟು ಬಂಧನಗಳ ಹಗ್ಗಗಳಿಂದ ಮನುಷ್ಯರನ್ನು ಬಂಧಿಸಿದ್ದಾರೆಂದು ಚಿತ್ರದಲ್ಲಿ ತೋರಿಸುತ್ತಾರಲ್ಲವೇ! ಇದು ಯಾರ ಚಿತ್ರವಾಗಿದೆ? ತಾವಂತೂ ಅದು ಅಲ್ಲ ತಾನೆ? ತಾವಂತೂ ಮುಕ್ತರಾಗಿದ್ದೀರಲ್ಲವೇ ಅಂದಾಗ ಜೀವನದಲ್ಲಿ ಇದ್ದರೂ ಜೀವನ್ಮುಕ್ತರಾಗಿದ್ದೀರಿ. ಅಂದಾಗ ಜ್ಞಾನದ ಖಜಾನೆಯಿಂದ ವಿಶೇಷವಾಗಿ ಮುಕ್ತಿ-ಜೀವನ್ಮುಕ್ತಿಯ ಪ್ರಾಪ್ತಿಯ ಅನುಭವ ಮಾಡುತ್ತಿದ್ದೀರಿ.

**ಎರಡನೆಯದಾಗಿ**- ಸ್ಮೃತಿ ಅರ್ಥಾತ್ ಯೋಗದ ಮುಖಾಂತರ ಸರ್ವ ಶಕ್ತಿಗಳ ಖಜಾನೆಯ ಅನುಭವ ಮಾಡುತ್ತಿದ್ದೀರಿ, ಎಷ್ಟು ಶಕ್ತಿಗಳಿವೆ? ಬಹಳ ಇದೆಯಲ್ಲವೇ! ಅಷ್ಟ ಶಕ್ತಿಗಳಂತೂ ಒಂದು ಉದಾಹರಣೆಯ ರೂಪದಲ್ಲಿ ತೋರಿಸುತ್ತಾರೆ. ಆದರೆ ಸರ್ವ ಶಕ್ತಿಗಳ ಖಜಾನೆಗೆ ಮಾಲಿಕರಾಗಿದ್ದೀರಲ್ಲವೇ.

**ಮೂರನೆಯದಾಗಿ** -ಧಾರಣೆಯ ಸಬ್ಜೆಕ್ಟ್ ನ ಮುಖಾಂತರ ಯಾವ ಖಜಾನೆ ಲಭಿಸಿದೆ? ಎಲ್ಲಾ ದಿವ್ಯ ಗುಣಗಳ ಖಜಾನೆ ಪ್ರಾಪ್ತಿಯಾಗಿದೆ. ಎಷ್ಟು ಗುಣಗಳಿವೆ ಬಹಳ ಇವೆಯಲ್ಲವೇ. ಅಂದಾಗ ಸರ್ವ ಗುಣಗಳ ಖಜಾನೆಯಾಗಿದೆ. ಪ್ರತಿಯೊಂದು ಗುಣ, ಶಕ್ತಿಯ ವಿಶೇಷತೆ ಎಷ್ಟು ದೊಡ್ಡದಿದೆ! ಪ್ರತಿಯೊಂದು ಜ್ಞಾನ ರತ್ನದ ಮಹಿಮೆ ಎಷ್ಟು ದೊಡ್ಡದಿದೆ.

**ನಾಲ್ಕನೆಯದಾಗಿ**- ಸೇವೆಯ ಮುಖಾಂತರ ಸದಾ ಖುಷಿಯ ಖಜಾನೆಯ ಅನುಭೂತಿ ಮಾಡುತ್ತೀರಿ. ಯಾವ ಸೇವೆ ಮಾಡುತ್ತೀರೋ ಅದರಿಂದ ವಿಶೇಷವಾಗಿ ಏನು ಅನುಭವ ಆಗುತ್ತದೆ ಖುಷಿಯಾಗುತ್ತದೆಯಲ್ಲವೇ. ಅಂದಾಗ ಎಲ್ಲದಕ್ಕಿಂತ ದೊಡ್ಡ ಖಜಾನೆ ಅವಿನಾಶಿ ಖುಷಿಯಾಗಿದೆ. ಅಂದಮೇಲೆ ಖುಷಿಯ ಖಜಾನೆ ಸಹಜವಾಗಿ ಸ್ವತಃವಾಗಿ ಪ್ರಾಪ್ತಿಯಾಗುತ್ತದೆ.

**ಐದನೆಯದಾಗಿ-** ಸಂಬಂಧ-ಸಂಪರ್ಕದ ಮುಖಾಂತರ ಬ್ರಾಹ್ಮಣ ಪರಿವಾರದ ಸಂಪರ್ಕದಲ್ಲಿ ಬರುತ್ತೀರಿ. ಸೇವೆಯ ಸಂಬಂಧದಲ್ಲೂ ಬರುತ್ತೀರಿ ಅಂದಮೇಲೆ ಸಂಬಂಧ ಸಂಪರ್ಕದ ಮುಖಾಂತರ ಏನು ಖಜಾನೆಗಳು ಸಿಗುತ್ತದೆ? ಎಲ್ಲರ ಆಶೀರ್ವಾದಗಳ ಖಜಾನೆ ಸಿಗುತ್ತದೆ. ಈ ಆಶೀರ್ವಾದಗಳ ಖಜಾನೆ ಬಹಳ ದೊಡ್ಡ ಖಜಾನೆಯಾಗಿದೆ. ಯಾರು ಎಲ್ಲರ ಅಶೀರ್ವಾದದ ಖಜಾನೆಯಿಂದ ಭರ್ಪೂರ್ ಆಗಿರುತ್ತಾರೋ, ಸಂಪನ್ನವಾಗಿರುತ್ತಾರೋ ಅವರಿಗೆ ಎಂದೂ ಸಹ ಪುರುಷಾರ್ಥದಲ್ಲಿ ಪರಿಶ್ರಮ ಮಾಡಬೇಕಾಗಿರುವುದಿಲ್ಲ. ಮೊದಲು ಮಾತಾ-ಪಿತರ ಆಶೀರ್ವಾದಗಳು ಮತ್ತೆ ಜೊತೆಯಲ್ಲಿ ಸರ್ವ ಸಂಬಂಧದಲ್ಲಿ ಬರುವುದರಿಂದ ಸರ್ವರ ಆಶೀರ್ವಾದಗಳು. ಆಶೀರ್ವಾದ ಎಲ್ಲದಕ್ಕಿಂತ ದೊಡ್ಡ ತೀವ್ರವಾಗಿ ಹಾರುವ ತೀಕ್ಷ್ಣ ಯಂತ್ರವಾಗಿದೆ. ಹೇಗೆ ವಿಜ್ಞಾನದಲ್ಲಿ ಎಲ್ಲದಕ್ಕಿಂತ ಅತಿ ದೊಡ್ಡ ತೀವ್ರಗತಿಯ ರಾಕೆಟ್ ಇದೆ. ಅದರೆ ಅಶೀರ್ವಾದದ ರಾಕೆಟ್ ಅದಕ್ಕಿಂತಲೂ ಶ್ರೇಷ್ಠವಾಗಿದೆ. ವಿಘ್ನ ಸ್ವಲ್ಪವೂ ಸ್ವರ್ಧೆ ಮಾಡುವುದಿಲ್ಲ. ವಿಘ್ನಪ್ರೂಫ್ ಆಗಿಬಿಡುತ್ತದೆ. ಯುದ್ಧ ಮಾಡಬೇಕಾಗಿಲ್ಲ. ಸಹಜವಾಗಿ ಯೋಗಯುಕ್ತ, ಯುಕ್ತಿಯುಕ್ತವಾಗಿ ಪ್ರತಿಯೊಂದು ಕರ್ಮ, ಮಾತು. ಸಂಕಟ ಸ್ವತಃ ವಾಗಿಯೇ ಆಗಿಬಿಡುತ್ತದೆ. ಆಶೀರ್ವಾದಗಳ ಖಜಾನೆ ಇಂತಹದು. ಎಲ್ಲದಕ್ಕಿಂತ ದೊಡ್ಡ ಖಜಾನೆ ಈ ಸಂಗಮಯುಗದ ಸಮಯದ ಖಜಾನೆಯಾಗಿದೆ.

ಈ ರೀತಿ ಖಜಾನೆಗಳಂತೂ ಬಹಳಷ್ಟು ಇದೆ. ಆದರೆ ಯಾವ ಖಜಾನೆಗಳನ್ನು ತಿಳಿಸಿದ್ದೇವೋ. ಕೇವಲ ಈ ಖಜಾನೆಗಳನ್ನೂ ಸಹ ತಮ್ಮ ಒಳಗಡೆ ಸಮಾವೇಶ ಮಾಡಿಕೊಳ್ಳುವ ಶಕ್ತಿಯನ್ನು ಧಾರಣೆ ಮಾಡಿಕೊಂಡಿದ್ದೇ ಆದರೆ ಸದಾ ಸಂಪನ್ನರಾಗಿರುವ ಕಾರಣ ಸ್ವಲ್ಪವೂ ಏರು-ಪೇರು ಇರುವುದಿಲ್ಲ. ಯಾವಾಗ ಖಾಲಿ ಆಗುತ್ತಾರೋ ಆಗ ಏರುಪೇರಿನಲ್ಲಿ ಬರುತ್ತೀರಿ. ಭರ್ಪೂರ್ ಆತ್ಮ ಅಲುಗಾಡುವುದಿಲ್ಲ. ಅಂದಾಗ ಈ ಖಜಾನೆಗಳನ್ನು ಚೆಕ್ ಮಾಡಿಕೊಳ್ಳಿ ಎಲ್ಲಾ ಖಜಾನೆಗಳು ನನ್ನಲ್ಲಿ ಸಮಾವೇಶವಾಗಿದೆಯೇ? ಈ ಎಲ್ಲಾ ಖಜಾನೆಗಳಿಂದ ಭರ್ಪೂರ್ ಆಗಿದ್ದೇನೆಯೇ? ಅಥವಾ ಕೆಲವೊಂದರಲ್ಲಿ ಭರ್ಪೂರ್ ಆಗಿದೆ ಕೆಲವೊಂದರಲ್ಲಿ ಭರ್ಪೂರ್ ಆಗಬೇಕಾಗಿದೆಯೋ? ಎಲ್ಲರಿಗೂ ಖಜಾನೆಗಳಂತೂ ಸಿಕ್ಕಿದೆಯಲ್ಲವೇ. ಒಬ್ಬರ ಮುಖಾಂತರ ಒಂದೇ ತರಹ ಖಜಾನೆಗಳು ಸಿಕ್ಕಿದೆಯಲ್ಲವೇ? ಬೇರೆ-ಬೇರೆ ರೀತಿಯಲ್ಲಿ ಹಂಚಿಲ್ಲತಾನೆ. ಒಬ್ಬರಿಗೆ ಲಕ್ಷ, ಇನ್ನೊಬ್ಬರಿಗೆ ಕೋಟಿ ಈ ರೀತಿಯಂತೂ ಕೊಟ್ಟಿಲ್ಲತಾನೆ? ಆದರೆ ಮೊದಲನೆಯವರು ಕೇವಲ ಪಡೆದುಕೊಳ್ಳುವವರು - ಏನೆಲ್ಲಾ ಸಿಗುತ್ತದೆಯೋ ತೆಗೆದುಕೊಳ್ಳುತ್ತಾರೆ. ಆದರೆ ಸಿಕ್ಕಿರುವುದನ್ನು ತಿಂದು, ಕುಡಿದು ಮಜಾ ಮಾಡಿ ಮತ್ತೆ ಸಮಾಪ್ತಿ ಮಾಡಿಬಿಡುತ್ತಾರೆ. ಇನ್ನೊಬ್ಬರು ಸಿಕ್ಕಿರುವ ಖಜಾನೆಗಳನ್ನು ಜಮಾ ಮಾಡಿಕೊಳ್ಳುತ್ತಾರೆ. ತಿನ್ನುತ್ತಾರೆ. ಕುಡಿಯುತ್ತಾರೆ, ಮಜಾ ಮಾಡುತ್ತಾರೆ, ಜಮಾನೂ ಸಹ ಮಾಡಿಕೊಳ್ಳುತ್ತಾರೆ. ಮೂರನೆಯವರು - ಜಮಾನೂ ಮಾಡಿಕೊಳ್ಳುತ್ತಾರೆ. ತಿನ್ನುತ್ತಾರೆ-ಕುಡಿಯುತ್ತಾರೆ ಆದರೂ ಸಹ ಸಿಕ್ಕಿರುವ ಖಜಾನೆಗಳನ್ನು ಇನ್ನೂ ಹೆಚ್ಚಿಸಿಕೊಳ್ಳುತ್ತಾರೆ. ತಂದೆಯ ಖಜಾನೆಯನ್ನು ತನ್ನ ಖಜಾನೆಯನ್ನಾಗಿ ಮಾಡಿಕೊಂಡು ಹೆಚ್ಚಿಸಿಕೊಳ್ಳುತ್ತಾರೆ. ಅಂದಾಗ ಮೊದಲನೆಯವರಾ, ಎರಡನೆಯವರಾ ಅಥವಾ ಮೂರನೆಯವರಾ ಎಂದು ತಮ್ಮನ್ನು ತಾವು ನೋಡಿಕೊಳ್ಳಿ.

**ಎಷ್ಟು ಖಜಾನೆಯನ್ನು ಸ್ವಯಂನ ಕಾರ್ಯದಲ್ಲಿ, ಅನ್ಯರ ಕಾರ್ಯದಲ್ಲಿ, ಸೇವೆಯಲ್ಲಿ ತೊಡಗಿಸುತ್ತೀರೋ ಅಷ್ಟು ಹೆಚ್ಚಾಗುತ್ತದೆ. ಖಜಾನೆಯನ್ನು ಹೆಚ್ಚಿಸುಕೊಳ್ಳುವ ಬೀಗದ ಕೈ ಉಪಯೋಗಿಸುವುದು. ಮೊದಲು ತಮ್ಮ ಪ್ರತಿ**

ಉಪಯೋಗಿಸಬೇಕು. ಹೇಗೆ ಒಂದೊಂದು ಜ್ಞಾನರತ್ನಗಳನ್ನು ಸಮಯಾನುಸಾರ ಒಂದುವೇಳೆ ಸ್ವಯಂ ಪ್ರತಿ ಉಪಯೋಗಿಸಿದ್ದೇ ಆದರೆ ಅನುಭವಿ ಆಗಿ ಬಿಡುತ್ತೀರಿ. ಯಾವ ಖಜಾನೆಗಳು ಪ್ರಾಪ್ತಿಯಾಗಿದೆಯೋ ಅದು ಜೀವನದಲ್ಲಿ ಉಪಯೋಗಿಸುವುದರಿಂದ ಅನುಭವದ ಅಥಾರಿಟಿ ಬಂದುಬಿಡುತ್ತದೆ. ಅಂದಾಗ ಅಥಾರಿಟಿಯ ಖಜಾನೆ ಜಮಾ ಆಗಿಬಿಡುತ್ತದೆ. ಅಂದಮೇಲೆ ವೃದ್ಧಿ ಆಗಿದೆಯಲ್ಲವೇ. ಕೇವಲ ಕೇಳುವುದು ಬೇರೆ ಮಾತಾಗಿದೆ. ಕೇಳುವುದು ಅರ್ಥಾತ್ ತೆಗೆದುಕೊಳ್ಳುವುದಲ್ಲ. ಸಮಾವೇಶ ಮಾಡಿಕೊಂಡು ಸಮಯಾನುಸಾರ ಕಾರ್ಯದಲ್ಲಿ ಉಪಯೋಗಿಸುವುದು - ಇದು ತೆಗೆದುಕೊಳ್ಳುವುದಾಗಿದೆ. ಕೇಳುವವರು ಏನು ಮಾಡುತ್ತಾರೆ ಮತ್ತು ಸಮಾವೇಶ ಮಾಡಿಕೊಳ್ಳುವವರು ಏನು ಮಾಡುತ್ತಾರೆ ಎರಡರಲ್ಲಿ ಬಹಳ ಅಂತರವಿದೆ.

ಕೇಳುವವರ ದೃಶ್ಯ ನೋಡಿದಾಗ ಬಾಪ್ ದಾದಾರವರಿಗೆ ನಗು ಬರುತ್ತದೆ ಕೇಳುವವರು ಸಮಯಾನುಸಾರ ಪರಿಸ್ಥಿತಿಯ ಪ್ರಮಾಣ ಅಥವಾ ವಿಘ್ನ ಪ್ರಮಾಣ, ಸಮಸ್ಯಾ ಪ್ರಮಾಣ ಬಾಪ್ ದಾದಾರವರು ಈ ವಿಘ್ನವನ್ನು ಪಾರು ಮಾಡಲು ಇಂತಹ ಪಾಯಿಂಟ್ಸ್ ಕೊಟ್ಟಿದ್ದಾರೆಂದು ಪಾಯಿಂಟನ್ನು (ಬಿಂದುವನ್ನು) ನೆನಪು ಮಾಡುತ್ತಾರೆ. ಈ ರೀತಿ ಮಾಡಬೇಕು. ಈ ರೀತಿ ಮಾಡಬಾರದು ಎಂದು ರಿಪೀಟ್ ಮಾಡುತ್ತಾ ನೆನಪು ಮಾಡುತ್ತಾರೆ. ಒಂದುಕಡೆ ಪಾಯಿಂಟನ್ನು ರಿಪೀಟ್ ಮಾಡುತ್ತಾರೆ ಇನ್ನೊಂದು ಕಡೆ ವಶೀಭೂತರಾಗುತ್ತಾರೆ. ಈ ರೀತಿ ಮಾಡಬಾರದು." ಇದು ಸ್ಥಾನ ಅಲ್ಲ. ಇದು ದಿವ್ಯಗುಣ ಅಲ್ಲ. ಎದುರಿಸುವ ಶಕ್ತಿಯನ್ನು ಧಾರಣೆ ಮಾಡಬೇಕು ಯಾರಿಗೂ ದುಃಖ ಕೊಡಬಾರದೆಂದು ಹೇಳುತ್ತಾರೆ. ರಿಪೀಟ್ ಮಾಡುತ್ತಿರುತ್ತಾರೆ. ಆದರೂ ಸಹ ಫೇಲ್ ಆಗಿಬಿಡುತ್ತಾರೆ. ಒಂದುವೇಳೆ ಆ ಸಮಯದಲ್ಲೇ ಅವರನ್ನು ಇದು ಸರಿಯೇನು? ಎಂದು ಕೇಳಿದರೆ ಸರಿಯಲ್ಲ ಆದರೆ ಆಗಿಬಿಡುತ್ತದೆ ಎಂದು ಉತ್ತರ ಕೊಡುತ್ತಾರೆ. ಹೇಳುತ್ತಾರೆ ಮತ್ತೆ ಮರೆತುಬಿಡುತ್ತಾರೆ. ಅಂದಾಗ ಅವರನ್ನು ಏನೇಂದು ಕರೆಯಬಹುದು? ಕೇಳುವವರಲ್ಲವೇ. ಕೇಳುವುದು ಬಹಳ ಚೆನ್ನಾಗಿರುತ್ತದೆ. ಪಾಯಿಂಟ್ ಬಹಳ ಶಕ್ತಿಶಾಲಿಯಾಗಿದೆ. ಆದರೆ ಉಪಯೋಗಿಸುವ ಸಮಯದಲ್ಲಿ ಒಂದುವೇಳೆ ಶಕ್ತಿಶಾಲಿ ಪಾಯಿಂಟ್ ನಿಂದ ವಿಜಯಿ ಆಗಲಿಲ್ಲವೆಂದರೆ ಅವರಿಗೆ ಏನು ಹೇಳುತ್ತಾರೆ? ಕೇಳುವವರೆಂದು ಹೇಳುತ್ತಾರಲ್ಲವೆ!.

ಸಮಾವೇಶ ಮಾಡಿಕೊಳ್ಳುವರು ಏನಾದರು ಸಮಸ್ಯೆ ಅಥವಾ ಪರಿಸ್ಥಿತಿ ಎದುರಿಸಬೇಕಾದಾಗ ತ್ರಿಕಾಲದರ್ಶಿ ಸ್ಥಿತಿಯಲ್ಲಿ ಸ್ಥಿತರಾಗಿ ಸ್ವಯಂನ ಸ್ಥಿತಿಯ ಮುಖಾಂತರ ಸ್ಥಿತಿಯನ್ನು ಏನೂ ಇಲ್ಲದ ಹಾಗೆ ಪಾರು ಮಾಡಿಬಿಡುತ್ತಾರೆ. ಇವರಿಗೆ ಸಮಾವೇಶ ಮಾಡಿಕೊಳ್ಳುವವರು ಅರ್ಥಾತ್ ಸಮಯಾನುಸಾರ ಕಾರ್ಯದಲ್ಲಿ ಉಪಯೋಗಿಸುವುದು, ಸಮಯ ಪ್ರಮಾಣ ಪ್ರತಿಯೊಂದು ಶಕ್ತಿಯನ್ನು, ಪ್ರತಿ ಪಾಯಿಂಟನ್ನು, ಪ್ರತಿಯೊಂದು ಗುಣವನ್ನು ಆದೇಶದ ಪ್ರಮಾಣ ನಡೆಸುವುದು. ಹೇಗೆ ಸ್ಥೂಲ ಖಜಾನೆಯನ್ನು ಸ್ವಯಂ ಖಜಾನೆಯೇ ಉಪಯೋಗಿಸುಕೊಳ್ಳುವುದಿಲ್ಲ ಆದರೆ ಉಪಯೋಗಿಸುವವರು ಮನುಷ್ಯಾತ್ಮರು. ಅದನ್ನು ಯಾವಾಗ ಬೇಕೋ, ಎಷ್ಟು ಬೇಕೋ, ಹೇಗೆ ಬೇಕೋ, ಹಾಗೆ ಉಪಯೋಗಿಸಬಹುದು. ಅದೇ ರೀತಿ ಏನೆಲ್ಲಾ ಖಜಾನೆಗಳನ್ನು ತಿಳಿಸಲಾಗಿದೆ ಅದರ ಮಾಲಿಕರು ಯಾರಾಗಿದ್ದಾರೆ? ತಾವೋ ಅಥವಾ ಬೇರೆಯವರೋ? ಮಾಲಿಕರಾಗಿದ್ದೀರಲ್ಲವೇ. ಮಾಲಿಕರ ಕೆಲಸ ಏನಾಗಿದೆ? ಖಜಾನೆ ತನ್ನನ್ನು ನಡೆಸುತ್ತದೋ ಅಥವಾ ತಾನು ಖಜಾನೆಯನ್ನು ನಡೆಸುತ್ತಾರೋ? ಅಂದಾಗ ಪ್ರತಿ ಖಜಾನೆಗೆ ಮಾಲಿಕರಾಗಿ ಸಮಯಾನುಸಾರ ಜ್ಞಾನಿ ಅರ್ಥಾತ್ ಬುದ್ಧಿವಂತರು, ನಾಲೆಜ್

ಫುಲ್, ತ್ರಿಕಾಲದರ್ಶಿಯಾಗಿ ಖಜಾನೆಗಳನ್ನು ಕಾರ್ಯದಲ್ಲಿ ಉಪಯೋಗಿಸಿ. ಸಮಯ ಬಂದಾಗ ಸಹನಶಕ್ತಿಯನ್ನು ಆರ್ಡರ್ ಮಾಡಿದರೆ ಕಾರ್ಯ ಪೂರ್ತಿ ಆದ ನಂತರ ಸಹನಶಕ್ತಿ ಬರುವ ರೀತಿಯಲ್ಲ. ಅಳವಡಸಿಕೊಂಡಿರುವ ಶಕ್ತಿ ಯಾವ ಸಮಯದಲ್ಲಿ ಯಾವ ವಿಧಿಯಿಂದ ಬೇಕೋ ಆ ಸಮಯದಲ್ಲಿ ತನ್ನ ಕಾರ್ಯವನ್ನು ಮಾಡಬೇಕು. ಸಮಾವೇಶ ಮಾಡಿಕೊಂಡರೆ ಸರಿ ಆದರೆ ಸ್ವಲ್ಪ-ಸ್ವಲ್ಪ ಬಾಯಿಂದ ಬಂದುಬಿಟ್ಟದೆ. ಅರ್ಧ ಗಂಟೆ ಸಹನೆ ಮಾಡಿದೆ ಮತ್ತೆ ಒಂದು ಸೆಕೆಂಡು ಸಹನೆ ಮಾಡುವುದರ ಬದಲಾಗಿ ಮಾತಾಡಿ ಬಿಟ್ಟೆ - ಈ ರೀತಿಯಲ್ಲ. ಇವರಿಗೆ ಏನು ಹೇಳುತ್ತಾರೆ? ಖಜಾನೆಗೆ ಮಾಲಿಕರಾ ಅಥವಾ ದಾಸಿಯರಾ?

ಸರ್ವ ಶಕ್ತಿಗಳು ತಂದೆಯ ಅಧಿಕಾರದ ಖಜಾನೆಯಾಗಿದೆ. ಆಸ್ತಿ ಜನ್ಮಸಿದ್ಧ ಅಧಿಕಾರವಾಗಿದೆ. ಅಂದಾಗ ಜನ್ಮ ಸಿದ್ಧ ಅಧಿಕಾರದ ಎಷ್ಟು ನಶೆ ಇರುತ್ತದೆ! ಚಿಕ್ಕ ರಾಜಕುಮಾರ ಇರುತ್ತಾನೆ. ಏನು ಖಜಾನೆಗಳಿದೆ ಎಂದು ಗೊತ್ತಿರುವುದಿಲ್ಲ ಆದರೂ ಸಹ ನೆನಪಿಗೆ ಬರುವುದರಿಂದ ನಾನು ರಾಜಾ ಮಗುವಾಗಿದ್ದೇನೆಂದು ನಶೆ ಇರುತ್ತದೆ. ಅಂದಾಗ ಇದು ಮಾಲಿಕತನದ ನಶೆಯಲ್ಲವೇ, ಖಜಾನೆಗಳನ್ನು ಕಾರ್ಯದಲ್ಲಿ ತೊಡಗಿಸಿ. ಕಾರ್ಯದಲ್ಲಿ ಕಡಿಮೆ ಉಪಯೋಗಿಸುತ್ತೀರಿ. ಖುಷಿಯಾಗಿರುತ್ತೀರಿ, ಭರ್ಪೂರ್ ಆಗಿದ್ದೀರಿ. ಎಲ್ಲಾ ಸಿಕ್ಕಿದೆ. ಆದರೆ ಕಾರ್ಯದಲ್ಲಿ ತೊಡಗಿಸುವುದು, ಇದರಿಂದ ಸ್ವಯಂಗೆ ಪ್ರಾಪ್ತಿ ಮಾಡಿಕೊಳ್ಳುವುದು ಮತ್ತೆ ಅನ್ಯರಿಗೆ ಪ್ರಾಪ್ತಿ ಮಾಡಿಸುವುದರಲ್ಲಿ ನಂಬರ್‌ವಾರ್ ಆಗಿಬಿಡುತ್ತೀರಿ. ಇಲ್ಲವೆಂದರೆ ನಂಬರ್ ಏಕಾಗುತ್ತದೆ? ಯಾವಾಗ ಕೊಡುವವರು ಒಬ್ಬರೇ, ಕೊಡುವುದು ಏಕರಸವಾಗಿ ಅಂದಾಗ ನಂಬರ್ ಏಕೆ? ಅಂದಾಗ ಬಾಪ್ ದಾದಾರವರು ನೋಡಿದ್ದಾರೆ ಖಜಾನೆಗಳು ಬಹಳಷ್ಟು ಸಿಕ್ಕಿದೆ, ಎಲ್ಲಾ ಖಜಾನೆಗಳು ಭರ್ಪೂರ್ ಆಗಿದೆ. ಆದರೆ ಭರ್ಪೂರತೆಯ ಲಾಭವನ್ನು ಪಡೆಯುತ್ತಿಲ್ಲ. ಹೇಗೆ ಲೌಕಿಕದಲ್ಲೂ ಸಹ ಕೆಲವರಿಗೆ ಧನದಿಂದ ಆನಂದ ಅಥವಾ ಲಾಭ ಪ್ರಾಪ್ತಿ ಮಾಡಿಕೊಳ್ಳುವ ರೀತಿ ಬರುತ್ತದೆ ಹಾಗೂ ಕೆಲವರ ಹತ್ತಿರ ಬಹಳ ಹಣ ಇರುತ್ತದೆ ಆದರೆ ಉಪಯೋಗಿಸುವ ರೀತಿ ಬರುವುದಿಲ್ಲ. ಆದ್ದರಿಂದ ಇದ್ದರೂ ಸಹ ಇಲ್ಲದ ಹಾಗೆ ಆಗುತ್ತದೆ. ಅಂದಮೇಲೆ ಏನು ಅಂಡರ್ ಲೈನ್ ಮಾಡಬೇಕು? ಕೇವಲ ಕೇಳುವಂತಹವರಾಗಬೇಡಿ, ಉಪಯೋಗಿಸುವ ವಿಧಿಯಿಂದ ಈಗಲೂ ಸಹ ಸಿದ್ಧಿಯನ್ನು ಪ್ರಾಪ್ತಿ ಮಾಡಿಕೊಳ್ಳಿ. ಮತ್ತು ಅನೇಕ ಜನ್ಮಗಳ ಸಿದ್ಧಿಯನ್ನು ಪ್ರಾಪ್ತಿ ಮಾಡಿಕೊಳ್ಳಿ ಮತ್ತು ಅನೇಕ ಜನ್ಮಗಳ ಸದ್ಗತಿಯನ್ನು ಪ್ರಾಪ್ತಿ ಮಾಡಿಕೊಳ್ಳಿ.

**ದಿವ್ಯಗುಣಗಳೂ ಸಹ ತಂದೆಯ ಆಸ್ತಿಯಾಗಿದೆ. ಪ್ರಾಪ್ತಿಯಾದ ಆಸ್ತಿಯನ್ನು ಕಾರ್ಯದಲ್ಲಿ ತರುವುದರಲ್ಲಿ ಕಷ್ಟವೇನಿದೆ? ಆದೇಶ ಮಾಡಿ, ಆದೇಶ ಮಾಡಲು ಬರುವುದಿಲ್ಲವೇ? ಮಾಲಿಕನಿಗೆ ಆದೇಶ ಮಾಡುವುದು ಬರುತ್ತದೆ. ಬಲಹೀನರಿಗೆ ಆದೇಶ ಮಾಡಲು ಬರುವುದಿಲ್ಲ, ಹೇಳಲೋ ಅಥವಾ ಬೇಡವೋ, ಸಹಾಯ ಸಿಗುತ್ತದೋ ಇಲ್ಲವೋ ಗೊತ್ತಿಲ್ಲ ಎಂದು ಬಲಹೀನರು ಯೋಚಿಸುತ್ತಾರೆ. ತಮ್ಮ ಖಜಾನೆಯಲ್ಲವೇ. ತಂದೆಯ ಖಜಾನೆಯು ತಮ್ಮ ಖಜಾನೆಯಾಗಿದೆ ಅಥವಾ ತಂದೆಯ ಖಜಾನೆ ನಮ್ಮ ಖಜಾನೆ ಅಲ್ಲ ಎನ್ನುತ್ತೀರಾ? ತಂದೆ ಏಕೆ ಕೊಟ್ಟಿದ್ದಾರೆ? ತನ್ನದನ್ನಾಗಿ ಮಾಡಿಕೊಳ್ಳಲು ಕೊಟ್ಟಿದ್ದಾರೋ ಅಥವಾ ನೋಡಿ ಖುಷಿ ಪಡಲು ಕೊಟ್ಟಿದ್ದಾರೋ? ಕರ್ಮದಲ್ಲಿ ಉಪಯೋಗಿಸಲು ದೊರಕಿವೆ. ಫಲಿತಾಂಶದಲ್ಲಿ ನೋಡಿದಾಗ ಎಲ್ಲಾ ಖಜಾನೆಗಳನ್ನು ಜಮಾ ಮಾಡಿಕೊಳ್ಳುವುದರ ವಿಧಿಯ ಕೊರತೆಯಿದೆ. ಜ್ಞಾನವನ್ನು (ಪಾಯಿಂಟನ್ನು) ರಿಪೀಟ್ ಮಾಡುವುದು, ಬುದ್ಧಿಯಲ್ಲಿ ಇಟ್ಟುಕೊಳ್ಳುವುದು, ಇದು ಜ್ಞಾನದ ಅರ್ಥವಲ್ಲ. ಜ್ಞಾನದ ಅರ್ಥವನ್ನು ತಿಳಿದು**

**ತ್ರಿಕಾಲದರ್ಶಿಯಾಗುವುದರ ತಿಳುವಳಿಕೆ ಸತ್ಯ-ಅಸತ್ಯದ ತಿಳುವಳಿಕೆ ಸಮಯ ಪ್ರಮಾಣ ಕರ್ಮ ಮಾಡುವುದರ ತಿಳುವಳಿಕೆ. ಇದಕ್ಕೆ ಜ್ಞಾನವೆಂದು ಕರೆಯಲಾಗುತ್ತದೆ.**

ಒಂದುವೇಳೆ ಯಾರಾದರೂ ಇಷ್ಟೊಂದು ತಿಳುವಳಿಕೆವುಳ್ಳವರಾಗಿರಬಹುದು ಮತ್ತು ಸಮಯ ಬಂದಾಗ ತಿಳುವಳಿಕೆ ಹೀನರಾದ ಕಾರ್ಯವನ್ನು ಮಾಡಿದರೆ ಅವರಿಗೆ ಜ್ಞಾನಿ ಎಂದು ಹೇಳುತ್ತಾರೆಯೇ? ತಿಳುವಳಿಕೆವುಳ್ಳವರು ಒಂದುವೇಳೆ ತಿಳುವಳಿಕೆಹೀನರಾದರೆಂದರೆ ಅವರಿಗೆ ಏನೆಂದು ಹೇಳಲಾಗುತ್ತದೆ" ಬುದ್ಧಿಹೀನರಿಗೆ ಏನೂ ಹೇಳಲು ಆಗುವುದಿಲ್ಲ. ಆದರೆ ತಿಳುವಳಿಕೆಯುಳ್ಳವರಿಗೆ ಎಲ್ಲರೂ ಸಲಹೆಯನ್ನು ಕೊಡುತ್ತಾರೆ - ಇದು ಬುದ್ಧಿವಂತಿಕೆಯೇ? ಜ್ಞಾನದ ಖಜಾನೆಯನ್ನು ಧಾರಣೆ ಮಾಡುವುದು ಜಮಾ ಮಾಡಿಕೊಳ್ಳುವುದು ಅರ್ಥಾತ್ ಪ್ರತಿ ಸಮಯ, ಪ್ರತಿ ಕಾರ್ಯ, ಪ್ರತಿ ಕರ್ಮದಲ್ಲಿ ತಿಳುವಳಿಕೆಯಿಂದ ನಡೆಯುವುದು. ತಿಳಿಯಿತೇ? ತಾವು ಮಹಾನ್ ತಿಳುವಳಿಕೆ ಉಳ್ಳವರಾಗಿದ್ದೀರಲ್ಲವೇ? "ಜ್ಞಾನಿ ಆತ್ಮರೊ" ಅಥವಾ ಜ್ಞಾನವನ್ನು ಕೇಳುವಂತಹ ಆತ್ಮರೋ? ಪರಿಶೀಲನೆ ಮಾಡಿಕೊಳ್ಳಿ - ಇಂತಹ ಜ್ಞಾನಿ ಆತ್ಮರು ಎಲ್ಲಿಯತನಕ ಆಗಿದ್ದೇವೆ - ಪ್ರತ್ಯಕ್ಷ ಕರ್ಮದಲ್ಲಿ. ಮಾತಿನಲ್ಲ... ಎಲ್ಲರಿಂದ ಕೈ ಎತ್ತಿಸಿದರೆ ಎಲ್ಲರೂ ನಾವೇ ಲಕ್ಷ್ಮೀ-ನಾರಾಯಣರಾಗುತ್ತೇವೆ ಎಂದು ಹೇಳುತ್ತೀರಿ. ನಾವು ರಾಮ-ಸೀತೆ ಆಗುವುದಿಲ್ಲ ಎಂದು ಹೇಳುತ್ತೀರಿ. ಆದರೆ ಯಾರಾದರೂ ಒಬ್ಬರು ಆಗುತ್ತಾರಲ್ಲವೇ? ನಾವು ವಿಶ್ವ ಮಹಾರಾಜರಾಗುತ್ತೇವೆಂದು ಎಲ್ಲರೂ ಹೇಳುತ್ತೀರಿ. ಒಳ್ಳೆಯದು. ಲಕ್ಷ್ಯವೂ ಶ್ರೇಷ್ಠವಾಗಿರಬೇಕು. ಆದರೆ ಇದು ಲಕ್ಷ್ಯದವರೆವಿಗೆ ಅಲ್ಲ. ಲಕ್ಷ್ಯ ಮತ್ತು ಲಕ್ಷಣಗಳು ಸಮಾನವಿರಲಿ. ಲಕ್ಷ್ಯವಾಗಿದೆ ವಿಶ್ವಮಹಾರಾಜನ್ ಆಗುವುದು ಮತ್ತೆ ಕರ್ಮದಲ್ಲಿ ಒಂದುಪಟ್ಟು, ಒಂದು ಶಕ್ತಿಯೂ ಸಹ ನಿಮ್ಮ ಆದೇಶವನ್ನು ಒಪ್ಪುವುದೇ ಇಲ್ಲ ಅಂದಾಗ ಅಂತಹವರು ವಿಶ್ವಮಹಾರಾಜರು ಹೇಗೆ ಆಗುತ್ತಾರೆ. ತಮ್ಮದೇ ಖಜಾನೆ ತಮ್ಮ ಕೆಲಸಕ್ಕೆ ಬರಲಿಲ್ಲ ಎಂದಾಗ ವಿಶ್ವದ ಖಜಾನೆಯನ್ನು ಹೇಗೆ ಸಂಭಾಲನೆ ಮಾಡುತ್ತೀರಿ? ಆದ್ದರಿಂದ ಸರ್ವ ಖಜಾನೆಯಿಂದ ಸಂಪನ್ನರಾಗಿ ಹಾಗೂ ವಿಶೇಷವಾಗಿ ವರ್ತಮಾನ ಸಮಯ ಇದೇ ಸಹಜ ಪುರುಷಾರ್ಥ ಮಾಡಿ ಸರ್ವರಿಂದ. ಬಾಪ್‌ದಾದಾರವರಿಂದ ಆಶೀರ್ವಾದಗಳನ್ನು ತೆಗೆದುಕೊಳ್ಳುತ್ತಾ ಇರಿ. ಆಶೀರ್ವಾದ ಯಾರಿಗೆ ಸಿಗುತ್ತದೆ? ಯಾರು ಸಂತುಷ್ಟವಾಗಿದ್ದು ಎಲ್ಲರನ್ನೂ ಸಂತುಷ್ಟ ಪಡೆಸುತ್ತಾರೆಯೋ ಅವರಿಗೆ. ಎಲ್ಲಿ ಸಂತುಷ್ಟತೆ ಇದೆಯೋ ಅಲ್ಲಿ ಆಶೀರ್ವಾದವಿರುತ್ತದೆ. ತಮಗೆ ಬೇರೆ ಏನೂ ಬರುವುದಿಲ್ಲವೆಂದರೆ ಪರವಾಗಿಲ್ಲ. ಭಾಷಣ ಮಾಡಲು ಬರುವುದಿಲ್ಲವೇ ಪರವಾಗಿಲ್ಲ, ಸರ್ವಗುಣ ಧಾರಣೆ ಮಾಡುವುದರಲ್ಲಿ ಪರಿಶ್ರಮವಿರುತ್ತದೆ. ಸರ್ವ ಶಕ್ತಿಗಳನ್ನು ನಿಯಂತ್ರಣ ಮಾಡುವುದರಲ್ಲಿ ಪರಿಶ್ರಮವಾಗುತ್ತದೆ - ಅದನ್ನೂ ಸಹ ಬಿಟ್ಟುಬಿಡಿ ಆದರೆ **ಒಂದು ವಿಷಯವನ್ನು ಧಾರಣೆ ಮಾಡಿ ಆಶೀರ್ವಾದವನ್ನು ಎಲ್ಲರಿಗೂ ಕೊಡಬೇಕು ಮತ್ತು ಆಶೀರ್ವಾದವನ್ನು ಪಡೆದುಕೊಳ್ಳಬೇಕು. ಇದರಲ್ಲಿ ಯಾವುದೇ ಪರಿಶ್ರಮ ಪಡಬೇಕಾಗಿಲ್ಲ. ಮಾಡಿ ನೋಡಿ, ಒಂದುದಿನ ಅಮೃತವೇಳೆಯಿಂದ ಹಿಡಿದು ರಾತ್ರಿಯ ತನಕ ಆಶೀರ್ವಾದವನ್ನು ಕೊಡುವುದು ತೆಗೆದುಕೊಳ್ಳುವುದು ಇದೇ ಕಾರ್ಯವನ್ನು ಮಾಡಿ, ಇದರಲ್ಲಿ ಎಲ್ಲವೂ ಬಂದುಬಿಡುತ್ತದೆ. ದಿವ್ಯಗುಣ, ಶಕ್ತಿಗಳು, ತಾನಾಗಿಯೇ ಬಂದುಬಿಡುತ್ತದೆ. ಯಾರಾದರೂ ತಮಗೆ ದುಃಖವನ್ನು ಕೊಟ್ಟರೂ ಸಹ ತಾವು ಆಶೀರ್ವಾದವನ್ನು ಕೊಡಬೇಕಾಗಿದೆ. ಅಂದಾಗ ಸಹನೆಶಕ್ತಿ, ಅಳವಡಿಸಿಕೊಳ್ಳುವ ಶಕ್ತಿ ಇರುತ್ತದೆಯಲ್ಲವೇ, ಸಹನಶೀಲತೆಯ ಗುಣ ಇರುತ್ತದೆಯಲ್ಲವೇ ತಿಳಿಯಿತೇ.**

ಅಶೀರ್ವಾದವನ್ನು ತೆಗೆದುಕೊಳ್ಳುವುದು, ಆಶೀರ್ವಾದವನ್ನು ಕೊಡುವುದು ಬೀಜವಾಗಿದೆ. ಇದರಲ್ಲಿ ಇಡೀ ವೃಕ್ಷ ಸಮಾವೇಶವಾಗಿದೆ. ಇದರ ವಿಧಿಗಾಗಿ - ಎರಡು ವಿಷಯಗಳನ್ನು ನೆನಪಿಟ್ಟುಕೊಳ್ಳಿ - ಮೊದಲನೆಯದು. 1. ಶಿಕ್ಷಣ ಮತ್ತು 2. ಕ್ಷಮೆ ಶಿಕ್ಷಣವನ್ನು ಕೊಡುವ ಪ್ರಯತ್ನವನ್ನು ಬಹಳಷ್ಟು ಮಾಡುತ್ತೀರಿ. ಆದರೆ ಕ್ಷಮಿಸಲು ಬರುತ್ತಿಲ್ಲ. ಕ್ಷಮಿಸಬೇಕು, ಕ್ಷಮಿಸುವುದೇ ಶಿಕ್ಷಣ ಕೊಡುವುದಾಗುತ್ತದೆ. ಶಿಕ್ಷಣ ಕೊಡುತ್ತಿದ್ದೀರಿ ಕ್ಷಮೆಯನ್ನು ಮರೆತು ಹೋಗುತ್ತಿದ್ದೀರಿ ಆದರೆ ಕ್ಷಮಿಸಿದಾಗ ಅದು ಸ್ವತಹವಾಗಿ ಶಿಕ್ಷಣವಾಗುತ್ತದೆ. ಶಿಕ್ಷಕರಾಗುವುದು ಬಹಳ ಸಹಜ ಏಳುದಿನದ ಕೋರ್ಸಿನ ನಂತರವೇ ಶಿಕ್ಷಕರಾಗಿಬಿಡುತ್ತೀರಿ. ಕ್ಷಮಿಸುವುದು ಅರ್ಥಾಥ್ ದಯಾ ಹೃದಯಿ ಆಗುವುದಾಗಿದೆ. ಕೇವಲ ಶಿಕ್ಷಕರಾಗಬಾರದು. ಕ್ಷಮೆ ಮಾಡುತ್ತೀರೆಂದರೆ ಈಗಿನಿಂದ ಈ ಸಂಸ್ಕಾರವನ್ನು ಧಾರಣೆ ಮಾಡುತ್ತೀದ್ದೀರಿ ಆಗಲೇ ದೇವತೆಗಳಾಗಿ ನೀಡಲು ಸಾಧ್ಯವಿದೆ. ಮತ್ತು ಈಗಿನಿಂದಲೇ ಆಶೀರ್ವಾದವನ್ನು ಕೊಡುವಂತಹ ಸಂಸ್ಕಾರವನ್ನು ಪಕ್ಕಾ ಮಾಡಿಕೊಳ್ಳಿ. ಆಗಲೇ ತಮ್ಮ ಜಡಚಿತ್ರಗಳಿಂದಲೂ ಸಹ ಆಶೀರ್ವಾದಗಳನ್ನು ತೆಗೆದುಕೊಳ್ಳುತ್ತಿರುತ್ತೀರಿ. ಚಿತ್ರಗಳ ಮುಂದೆ ಹೋಗಿ ಏನು ಹೇಳುತ್ತೀರಿ? ಆಶೀರ್ವಾದವನ್ನು ಕೊಡಿ. ದಯೆಯನ್ನು ನೀಡಿ.... ತಮ್ಮ ಜಡಚಿತ್ರದಿಂದ ಆಶೀರ್ವಾದಗಳು ಸಿಕ್ಕಾಗ ಚೈತನ್ಯ ಆತ್ಮರಾದ ನಿಮ್ಮಿಂದ ಇನ್ನೆಷ್ಟು ಆಶೀರ್ವಾದಗಳು ಲಭಿಸುತ್ತವೆ ! ಆಶೀರ್ವಾದದ ಅಕ್ಷಯ(ಕ್ಷಯವಾಗದ) ಖಜಾನೆ ಪ್ರತಿಯೊಂದು ಹೆಜ್ಜೆಯಲ್ಲಿ ಸಿಗುತ್ತಿದೆ. ತೆಗೆದುಕೊಳ್ಳುವವರು ತೆಗೆದುಕೊಳ್ಳಬೇಕು. ತಾವು ನೋಡಿ, ಒಂದುವೇಳೆ ಶ್ರೀಮತದ ಪ್ರಮಾಣ ಯಾವುದೇ ಹೆಜ್ಜೆಯನ್ನು ಇಟ್ಟರೆ ಏನನ್ನು ಅನುಭವ ಮಾಡುತ್ತೀರಿ? ತಂದೆಯ ಆಶೀರ್ವಾದ ಸಿಗುತ್ತದೆಯಲ್ಲವೇ? ಒಂದುವೇಳೆ ಪ್ರತಿಯೊಂದು ಹೆಜ್ಜೆ ಶ್ರೀಮತದಂತೆ ಇಟ್ಟಿದ್ದೇ ಆದರೆ ಪ್ರತಿಯೊಂದು ಹೆಜ್ಜೆಯಲ್ಲಿ ಎಷ್ಟೊಂದು ಆಶೀರ್ವಾದ ಸಿಗುತ್ತದೆ? ಆಶೀರ್ವಾದದ ಖಜಾನೆ ಎಷ್ಟೊಂದು ತುಂಬಿತುಳುಕುತ್ತದೆ?

ಯಾರೇ ಏನೇ ಕೊಡಲಿ ಆದರೆ ತಾವು ಅವರಿಗೆ ಆಶೀರ್ವಾದವನ್ನು ನೀಡಿ, ಭಲೆ ಯಾರಾದರೂ ಕೋಪ ಮಾಡಿಕೊಳ್ಳಬಹುದು. ಅವರಿಗೂ ಸಹ ಆಶೀರ್ವಾದವನ್ನು ಕೊಡಿ. ಕ್ರೋಧದಲ್ಲಿ ಆಶೀರ್ವಾದವಿದೆಯೋ ಅಥವಾ ಯುದ್ಧವಿದೆಯೋ? ಯಾರೇಷ್ಟೇ ಕೋಪ ಮಾಡಿಕೊಳ್ಳಲಿ ಆದರೆ ತಮಗೆ ಅವರು ನಾನು ಪರವಶನಾಗಿದ್ದೇನೆ ಎಂದು ನೆನಪಿಗೆ ತರಿಸಿ ಕೊಡುತ್ತಾರೆ. ಆದರೆ ತಾವು ಮಾಸ್ಟರ್ ಸರ್ವಶಕ್ತಿವಂತರಾಗಿದ್ದೀರಿ. ಅಂದಾಗ ಆಶೀರ್ವಾದದ ಪ್ರಾಪ್ತಿಯಾಯಿತಲ್ಲವೇ. ತಾವು ಶೀತಲ ಜಲವನ್ನು ಹಾಕುವವರಾಗಿದ್ದೀರಿ. ಅಂದಾಗ ಕೋಪಿಷ್ಟರೂ ಸಹ ಆಶೀರ್ವಾದವನ್ನು ನೀಡಿದರಲ್ಲವೇ. ಅವರು ಏನನ್ನೇ ಮಾಡಲಿ ಆದರೆ ತಾವು ಅವರಿಂದ ಆಶೀರ್ವಾದವನ್ನೇ ತೆಗೆದುಕೊಳ್ಳಿ. ಕೇಳಿದರಲ್ಲವೇ, ಗುಲಾಬಿ ಹೂವಿನಲ್ಲಿಯೂ ಸಹ ಎಷ್ಟು ವಿಶೇಷತೆಯಿದೆ. ಎಷ್ಟೊಂದು ಕೊಳಕಾದ ಗೊಬ್ಬರದಿಂದ, ದುರ್ಗಂಧದಿಂದ ಸ್ವಯಂ ಏನನ್ನು ತೆಗೆದುಕೊಳ್ಳುತ್ತದೆ? ಪರಿಮಳವನ್ನೇ ತೆಗೆದುಕೊಳ್ಳುತ್ತದೆಯಲ್ಲವೇ? ಗುಲಾಬಿಯ ಪುಷ್ಪ ದುರ್ಗಂಧದಿಂದ ಸುಗಂಧವನ್ನು ತೆಗೆದುಕೊಳ್ಳಲು ಸಾಧ್ಯತೆಯಿದೆ. ಮತ್ತೆ ತಾವು ಕೋಪಿಷ್ಟರಿಂದ ಆಶೀರ್ವಾದವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲವೇ? ವಿಶ್ವ ಮಹಾರಾಜಾ ಗುಲಾಬಿ ಹೂವಾಗಬೇಕೋ ಅಥವಾ ತಾವು ಆಗಬೇಕೋ? ಇವರು ಸರಿಯಾದರೆ ನಾನು ಸರಿಯಾಗಿಬಿಡುತ್ತೇನೆ, ಈ ಪದ್ಧತಿ ಸರಿಯಾದರೆ ನಾನು ಸರಿಯಾಗಿಬಿಡುತ್ತೇನೆ. ಎಂದು ಎಂದೂ ಸಹ ಈ ರೀತಿ ಯೋಚನೆ ಮಾಡಬೇಡಿ ಎಂದಾದರೂ ಸಾಗರನ ಬಳಿ ಹೋಗಿ - ಹೇ ಅಲೆಯೇ ನೀನು ದೊಡ್ಡದಾಗಿ ಬರಬೇಡ, ಚಿಕ್ಕನಾಗಿ ಬಾ.

ಸೊಟ್ಟದಾಗಿ ಬರಬೇಡ. ನೇರವಾಗಿ ಬಾ ಎಂದು ಹೇಳುತ್ತೀರಾ? ಈ ಸಂಸಾರವೇ ಸಾಗರವಾಗಿದೆ. ಎಲ್ಲಾ ಅಲೆಗಳು ಚಿಕ್ಕವಾಗುವುದಿಲ್ಲ. ಸೊಟ್ಟದಾಗುವುದಿಲ್ಲ, ಸೀದಾ ಇರುವುದಿಲ್ಲ. ದೊಡ್ಡದಾಗಿರುವುದಿಲ್ಲ ಅಂದಾಗ ಆಧಾರವನ್ನು ಇಟ್ಟುಕೊಳ್ಳಬೇಡಿ. - ಇವರು ಸರಿಯಾದರೆ ನಾನು ಸರಿಯಾಗಿಬಿಡುತ್ತೇನೆಂದು ತಿಳಿಯಬೇಡಿ. ಪರಿಸ್ಥಿತಿ ದೊಡ್ಡದೋ ಅಥವಾ ತಾವು ದೊಡ್ಡವರೋ?

ಬಾಪ್ -ದಾದಾರವರ ಬಳಿ ಎಲ್ಲಾ ಮಾತುಗಳು ತಲುಪುತ್ತದೆಯಲ್ಲವೇ. ಇದನ್ನು ಸರಿ ಮಾಡಿದರೆ. ನಾನೂ ಸಹ ಸರಿಯಾಗಿಬಿಡುತ್ತೇನೆ. ಈ ಕೋಪ ಮಾಡಿಕೊಳ್ಳುವವರನ್ನು ಶಿತಲ ಮಾಡಿಬಿಟ್ಟರೆ ನಾನೂ ಶೀತಲ ಆಗಿಬಿಡುತ್ತೇನೆ. ಈ ರೀತಿ ಕಿರಿ-ಕಿರಿ ಮಾಡುವಂತಹವರನ್ನು ಬದಿಗೆ ಸರಿಸಿದ್ದೇ ಆದರೆ ಸೆಂಟರ್ ಸರಿಯಾಗಿಬಿಡುತ್ತದೆ. ಈ ರೀತಿ ವಾರ್ತಾಲಾಪ ಮಾಡಬಾರದು, ತಮ್ಮ ಸ್ಲೋಗನ್ ಆಗಿದೆ "ಸೇಡು ತೀರಿಸಿಕೊಳ್ಳದೇ ಬದಲಾವಣೆಯಾಗಿ ತೋರಿಸಬೇಕು". ಇವರು ಏಕೆ ಈ ರೀತಿ ಮಾಡುತ್ತಾರೆ? ಈ ರೀತಿ ಮಾಡಬಾರದು, ಇವರಂತೂ ಬದಲಾಗಲೇ ಬೇಕಾಗುತ್ತದೆ... ಆದರೆ ಸ್ವಯಂ ತಾವು ಮೊದಲು ಬದಲಾವಣೆ ಆಗಬೇಕು, ಸ್ವ ಪರಿವರ್ತನೆಯಿಂದ ಇತರರ ಪರಿವರ್ತನೆ ಅಥವಾ ವಿಶ್ವ ಪರಿವರ್ತನೆಯೋ ಅಥವಾ ಇತರರ ಪರಿವರ್ತನೆಯಿಂದ ಸ್ವ ಸ್ವಪರಿವರ್ತನಯೋ ಸ್ಲೋಗನ್‌ನ್ನು ತಪ್ಪಾಗಿ ಬರೆದಿಲ್ಲವಲ್ಲವೇ'' ಏನು ಮಾಡುತ್ತೀರಿ' ಸ್ವಯಂನ್ನು ಬದಲಾವಣೆ ಮಾಡಿಕೊಳ್ಳುತ್ತೀರೋ ಅಥವಾ ಅನ್ಯರನ್ನು ಬದಲಾವಣೆ ಮಾಡುವುದರಲ್ಲಿ ಸಮಯವನ್ನು ಕಳೆದುಬಿಡುತ್ತೀರೋ? ಭಲೆ ತಾವು ಒಂದು ವರ್ಷವನ್ನು ಬೇಕಾದರೂ ತೊಡಗಿಸಿ ನೋಡಿ. ಸ್ವಯಂನ್ನು ಬದಲಾವಣೆ ಮಾಡಿಕೊಳ್ಳಿ ಅನ್ಯರನ್ನು ಬದಲಾವಣೆ ಮಾಡಲು ಪ್ರಯತ್ನ ಮಾಡಿ. ಸಮಯ ಬದಲಾವಣೆಯಾಗುತ್ತದೆ ಆದರೆ ತಾವು ಬದಲಾವಣೆ ಆಗುವುದಿಲ್ಲ ಅವರೂ ಸಹ ಬದಲಾವಣೆ ಆಗುವುದಿಲ್ಲ. ತಿಳಿಯಿತೇ. ಸರ್ವ ಖಜಾನೆಗಳಿಗೆ ಮಾಲೀಕರಾಗುವುದು ಅರ್ಥಾತ್ ಸಮಯಕ್ಕೆ ಖಜಾನೆಗಳನ್ನು ಕಾರ್ಯದಲ್ಲಿ ಉಪಯೋಗಿಸುವುದು. ಒಳ್ಳೆಯದು.

**ಸರ್ವ ಖಜಾನೆಗಳಿಂದ ಸಂಪನ್ನ ಆತ್ಮರಿಗೆ, ಸರ್ವ ಖಜಾನೆಯನ್ನು ಕಾರ್ಯದಲ್ಲಿ ಉಪಯೋಗಿಸುವಂತಹವರಿಗೆ, ವೃದ್ಧಿ ಮಾಡುವ ಜ್ಞಾನಿ ಆತ್ಮರಾಗಿ ಸಮಯಕ್ಕೆ ವಿಧಿ ಪೂರ್ವಕವಾಗಿ ಕಾರ್ಯದಲ್ಲಿ ತೊಡಗಿಸುವಂತಹ ಶ್ರೇಷ್ಠ ಆತ್ಮರಿಗೆ, ಪ್ರತಿಯೊಂದು ಶಕ್ತಿ, ಪ್ರತಿಯೊಂದು ಗುಣದ ಅಧಿಕಾರಿಯಾಗಿ ಸ್ವಯಂನಲ್ಲಿ ಮತ್ತು ಸರ್ವರಲ್ಲಿ ತುಂಬುವಂತಹ ವಿಶೇಷ ಆತ್ಮರಿಗೆ, ಸದಾ ಆಶೀರ್ವಾದದ ಖಜಾನೆಯಿಂದ ಸಹಜ ಪುರುಷಾರ್ಥದ ಅನುಭವ ಮಾಡುವಂತಹ ಸಹಜಯೋಗಿ ಆತ್ಮರಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 30-11-1992.

***ಆಶೀರ್ವಾದಗಳನ್ನು ಕೊಡಿ ಮತ್ತು ಆಶೀರ್ವಾದಗಳನ್ನು ಪಡೆದುಕೊಳ್ಳಿ***

ಆಶೀರ್ವಾದಗಳನ್ನು ಕೊಡಿ ಮತ್ತು ಆಶೀರ್ವಾದಗಳನ್ನು ಪಡೆಯಿರಿ. ಇದು ಬೀಜವಾಗಿದೆ ಇದರಲ್ಲಿ ಇಡೀ ವೃಕ್ಷವು ಸಮಾವೇಶವಾಗಿದೆ. ಇದರ ವಿಧಿಗಾಗಿ ಎರಡು ವಿಷಯಗಳನ್ನು ನೆನಪಿಟ್ಟುಕೊಳ್ಳಿ 1. ಶಿಕ್ಷಣ ಮತ್ತು 2. ಕ್ಷಮೆ ಶಿಕ್ಷಣವನ್ನು

ಕೊಡುವ ಪ್ರಯತ್ನವನ್ನು ಬಹಳಷ್ಟು ಮಾಡುತ್ತಿದ್ದೀರಿ. ಆದರೆ ಕ್ಷಮಿಸಲು ಬರುತ್ತಿಲ್ಲ. ಕ್ಷಮಿಸಬೇಕು, ಕ್ಷಮಿಸುವುದೇ ಶಿಕ್ಷಣ ಕೊಡುವುದಾಗಿದೆ. ಕ್ಷಮಿಸಿ, ದಯಾ ಹೃದಯಗಳಾಗಿ, ಈಗಿನಿಂದಲೇ ಈ ಸಂಸ್ಕಾರವನ್ನು ಧಾರಣೆ ಮಾಡಿರಿ ಈಗಿನಿಂದಲೇ ಆಶೀರ್ವಾದವನ್ನು ಕೊಡುವಂತಹ ಸಂಸ್ಕಾರವನ್ನು ಪಕ್ಕಾ ಮಾಡಿಕೊಳ್ಳಿರಿ ಆಗಲೇ ನಿಮ್ಮ ಜಡ ಚಿತ್ರಗಳಿಂದಲೂ ಸಹ ಆಶೀರ್ವಾದಗಳನ್ನು ಪಡೆಯುತ್ತೀರಿ. ಚಿತ್ರಗಳ ಮುಂದೆ ಹೋಗಿ ಏನು ಕೇಳುತ್ತೀರಿ ಆಶೀರ್ವಾದವನ್ನು ಕೊಡಿ, ದಯೆಯನ್ನು ಕೊಡಿ, ತಮ್ಮ ಜಡ ಚಿತ್ರದಿಂದ ಆಶೀರ್ವಾದಗಳು ಸಿಕ್ಕಾಗ, ಚೈತನ್ಯ ಆತ್ಮರಾದ ನಿಮ್ಮಿಂದ ಇನ್ನೆಷ್ಟು ಆಶೀರ್ವಾದಗಳು ಲಭಿಸುತ್ತದೆ! ಪ್ರತಿಯೊಂದು ಹೆಜ್ಜೆಯನ್ನು ಶ್ರೀಮತದ ಅನುಸಾರ ಇಟ್ಟಾಗ ಅಕ್ಷಯ ಖಜಾನೆಗಳು ನಿಮ್ಮ ಖಾತೆಯಲ್ಲಿ ಜಮಾ ಆಗುತ್ತದೆ. ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ತಂದೆಯಿಂದ ಲಭಿಸಿರುವ ಸರ್ವಖಜಾನೆಗಳಿಂದ ಸಂಪನ್ನವಾಗಿ ಮತ್ತು ಸದಾ ಸಂಪನ್ನತೆಯ ನಶೆಯಲ್ಲಿ ಇದ್ದೇನೆ.

2. ನಾನು ಪರಮಾತ್ಮನಿಂದ ಲಭಿಸಿರುವ ಜ್ಞಾನದ ಖಜಾನೆಯಿಂದ ಮುಕ್ತಿ-ಜೀವನ್ ಮುಕ್ತಿಯನ್ನು ಪಡೆದಿದ್ದೇನೆ. (ದುಃಖ, ಅಶಾಂತಿ, ಅನೇಕ ವ್ಯರ್ಥ ಮತ್ತು ವಿಕಲ್ಪಗಳು, ಕರ್ಮಗಳು ಎಲ್ಲಾ ಬಂಧನಗಳಿಂದ ಮುಕ್ತವಾಗಿದ್ದೇನೆ)

3. ನಾನು ಯೋಗದ ಖಜಾನೆಯಿಂದ ಪರಮಾತ್ಮನಿಂದ ಲಭಿಸಿರುವ ಸರ್ವ ಶಕ್ತಿಗಳ ಖಜಾನೆಗಳಿಗೆ ಮಾಲಿಕನಾಗಿದ್ದೇನೆ.

4. ನಾನು ಧಾರಣೆಯ ಸಬ್ಜೆಕ್ಟ್ ನಿಂದ ಪರಮಾತ್ಮನಿಂದ ಸರ್ವ ಗುಣಗಳ ಖಜಾನೆಯನ್ನು, ಪ್ರತಿ ಗುಣ ಮತ್ತು ಪ್ರತಿಯೊಂದು ಶಕ್ತಿಯ ವಿಶೇಷತೆಯನ್ನು ಪಡೆದಿದ್ದೇನೆ.

5. ನಾನು ಸೇವೆಯಿಂದ ಅವಿನಾಶಿ ಖುಷಿಯ ಖಜಾನೆಯನ್ನು ಪಡೆದಿದ್ದೇನೆ.

6. ನಾನು ಸರ್ವರ ಸಂಬಂಧ ಸಂಪರ್ಕಗಳಲ್ಲಿ ಬಂದು ಮಾತಾ-ಪಿತರ ಮತ್ತು ಸರ್ವರ ಆಶೀರ್ವಾದಗಳನ್ನು ಜೊತೆ ಇಟ್ಟುಕೊಂಡು, ಆಶೀರ್ವಾದಗಳ ಖಜಾನೆಯಿಂದ ಸಂಪನ್ನವಾಗಿ ವಿಘ್ನ ಪ್ರೂಫ್ ಆಗಿ ಇರುತ್ತಾ ಪ್ರತಿಯೊಂದು ಕರ್ಮ, ಸಂಕಲ್ಪ, ಮಾತನ್ನು ಯೋಗಯುಕ್ತವಾಗಿ ಯುಕ್ತಿಯುಕ್ತವಾಗಿಟ್ಟು ಕೊಂಡಿದ್ದೇನೆ.

7. ನಾನು ಪರಮಾತ್ಮನಿಂದ ಲಭಿಸಿರುವ ಸರ್ವಶಕ್ತಿಗಳನ್ನು, ಸಮಾವೇಶಗೊಳಿಸಿಕೊಳ್ಳುವ ಶಕ್ತಿಯನ್ನು ಧಾರಣೆ ಮಾಡಿ ಸದಾ ಸಂಪನ್ನವಾಗಿ ಇದ್ದೇನೆ.

8. ನಾನು ಸರ್ವ ಖಜಾನೆಗಳನ್ನು ಸ್ವಯಂನ ಕಾರ್ಯದಲ್ಲಿ ಮತ್ತು ಇತರರ ಸೇವಾ ಕಾರ್ಯದಲ್ಲಿ ಉಪಯೋಗಿಸಿ ಖಜಾನೆಗಳ ವೃದ್ಧಿಯನ್ನು ಮಾಡಿಕೊಂಡಿದ್ದೇನೆ.

9. ನಾನು ತಂದೆ ತಿಳಿಸಿರುವ ಪಾಯಿಂಟ್ಸ್ ಅನ್ನು ಧಾರಣೆ ಮಾಡಿ ಎಂತಹ ಪರಿಸ್ಥಿತಿ ಅಥವಾ ಸಮಸ್ಯೆ ಎದುರಿಗೆ ಬಂದಾಗಲೂ ತ್ರಿಕಾಲದರ್ಶಿಯ ಸ್ಥಿತಿಯಲ್ಲಿ ಇದ್ದುಕೊಂಡು ಸ್ವಸ್ಥಿತಿಯಿಂದ ಪರಿಸ್ಥಿತಿಯನ್ನು ಏನೂ ಇಲ್ಲ ಎಂಬಂತೆ ಪಾರು ಮಾಡಿ ಪ್ರತಿಯೊಂದು ಶಕ್ತಿಯನ್ನು, ಪ್ರತಿಯೊಂದು ಪಾಯಿಂಟ್ ಅನ್ನು, ಪ್ರತಿಯೊಂದು ಗುಣವನ್ನು ಆ ಜ್ಞಾನಾನುಸಾರ ನಡೆಸಿದ್ದೇನೆ.

10. ನಾನು ಖಜಾನೆಗಳಿಗೆ ಮಾಲಿಕನಾಗಿ ಸಮಯಾನುಸಾರ ಜ್ಞಾನ ಸ್ವರೂಪ ಅರ್ಥಾತ್ ಬುದ್ಧಿಯುಳ್ಳವರಾಗಿ ತ್ರಿಕಾಲದರ್ಶಿಯಾಗಿ ಕಾರ್ಯದಲ್ಲಿ ಉಪಯೋಗಿಸಿದ್ದೇನೆ.

11. ನಾನು ಸರ್ವಖಜಾನೆ ಗಳಿಗೆ ಮಾಲಿಕ, ವಾರಸತ್ವ ನನ್ನ ಜನ್ಮ ಸಿದ್ಧ ಅಧಿಕಾರ ಎಂಬ ನಶೆಯಲ್ಲಿ ಇದ್ದೇನೆ.

12. ನಾನು ಸರ್ವ ಖಜಾನೆಗಳನ್ನು ಕಾರ್ಯದಲ್ಲಿ ಉಪಯೋಗಿಸಿ ಸ್ವಯಂ ಪ್ರಾಪ್ತಿಯನ್ನು ಪಡೆದು ಇತರರಿಗೆ ಪ್ರಾಪ್ತಿಯನ್ನು ಕೊಟ್ಟು ನಂಬರ್ ವನ್ನಾಗಿ ಇದ್ದೇನೆ.

13. ನಾನು ಸಂತುಷ್ಟವಾಗಿ ಇರುತ್ತಾ ಇತರರನ್ನು ಸಂತುಷ್ಟ ಮಾಡಿ ಎಲ್ಲರಿಗೂ ಆಶೀರ್ವಾದಗಳನ್ನು ಕೊಟ್ಟು ಆಶೀರ್ವಾದಗಳನ್ನು ಪಡೆದಿರುವ ಸಹಜಪುರುಷಾರ್ಥಿ.

14. ನಾನು ತಂದೆಯ ಶ್ರೀಮತದ ಪ್ರಕಾರ ಪ್ರತಿಯೊಂದು ಹೆಜ್ಜೆಯನ್ನು ಇಟ್ಟು ತಂದೆಯ ಆಶೀರ್ವಾದಗಳನ್ನು ಪಡೆದಿದ್ದೇನೆ.

15. ನಾನು ಸೇಡನ್ನು ತೀರಿಸಿಕೊಳ್ಳದೆ ಬದಲಾವಣೆಯಾಗಿ ತೋರಿಸುತ್ತೇನೆ ಎಂಬ ಸ್ಲೋಗನನ್ನು ಸದಾ ಸ್ಮೃತಿಯಲ್ಲಿಟ್ಟುಕೊಂಡು ಧಾರಣೆ ಮಾಡಿದ್ದೇನೆ.